**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 10833/2018 ಚಾಸಾಃ 1 ಪ್ರಾಸಾಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಅನುರಾಗ್ ಅಗರ್ವಾಲ್ |
| ತಂದೆಯ ಹೆಸರು | : | ಎಂ.ಪಿ.ಅಗರ್ವಾಲ್ |
| ವಯಸ್ಸು | : | 48 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಜೈಪುರ, ರಾಜಸ್ಥಾನ |

**ಸಾಕ್ಷಿಯನ್ನು ದಿಃ 30.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-**

ನಾನು 2010 ರಲ್ಲಿ ಬೆಂಗಳೂರಿಗೆ ಬಂದೆನು. ನಾನು ಮನೆ ಕಟ್ಟಲು ನಿವೇಶನಗಳನ್ನು ಖರೀದಿಸಲು ಉದ್ದೇಶಿಸಿದೆನು. ಅದರಂತೆ ನಾನು ಆರೋಪಿಯನ್ನು ಭೇಟಿಯಾದೆನು. ಆರೋಪಿಯು ಯು.ಬಿ.ಎಸ್. ಪ್ರಾಪರ್ಟಿಸ್ ಎಂಬ ಲ್ಯಾಂಡ್ ಡೆವಲಪಿಂಗ್ ಆಫೀಸ್ ಅನ್ನು ಮಾರುತಿನಗರ, ಯಲಹಂಕದಲ್ಲಿ ಹೊಂದಿದ್ದರು. ಆರೋಪಿತರು ದೇವನಹಳ್ಳಿ ಏರ್ ಪೋರ್ಟ್ ಬಳಿ ನಿವೇಶನಗಳನ್ನು ಕೊಡಿಸುವುದಾಗಿ ತಿಳಿಸಿ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು. ನಾನು ನಿವೇಶನಗಳನ್ನು ನೋಡಿ ಖರೀದಿಸಲು ಒಪ್ಪಿದೆನು. ಆರೋಪಿಯಿಂದ ಎರಡು ನಿವೇಶನಗಳನ್ನು ಖರೀದಿಸಲು ಒಪ್ಪಂದ ಆಗಿತ್ತು. ಅದರಂತೆ ನಾನು 14 ಲಕ್ಷದ 50 ಸಾವಿರ ರೂಗಳನ್ನು ಎರಡು ಚೆಕ್ ಗಳ ಮುಖಾಂತರ ಆರೋಪಿಗೆ ಮುಂಗಡ ಹಣವಾಗಿ ಪಾವತಿಸಿರುತ್ತೇನೆ. ದಿನಾಂಕಃ25.02.2013 ರಂದು ಆರೋಪಿಯು ಸದರಿ ನಿವೇಶನಗಳ ಸಂಬಂಧ ಒಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ.

ಚೆಕ್ ಮತ್ತು ಕ್ರಯದ ಕರಾರು ಪತ್ರಗಳ ದೃಢೀಕೃತ ನಕಲನ್ನು ಹಾಜರುಪಡಿಸಲು ಸೂಚಿಸಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**